ಫ್ರಾಸಾ-5 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಿದ
ದಿನಾಂಕಃ 13-09-2024
ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಬಿ.ಆರ್.ಎಮ್. ವಕೀಲರಿಂದ

3. ದಿಃ 15.11.2012 ರಂದು ನಾನು ನಮ್ಮ ಕಛೇರಿಯಿಂದ ಲೋಕಾಯುಕ್ತ ಕಛೇರಿಗೆ ಪಂಚನಾಮೆಗೆ ಬಂದ ಬಗ್ಗೆ ನಮ್ಮ ಕಛೇರಿಯಲ್ಲಿ ಯಾವುದೇ ದಾಖಲೆ ಇರುವುದಿಲ್ಲ. ನಾನು ಕಂಪ್ಯೂಟರನಲ್ಲಿ ಧ್ವನಿ ಮುದ್ರಣ ಕೇಳಿದ್ದು ಪೋನನಲ್ಲಿ ಧ್ವನಿ ಮುದ್ರಣ ಕೇಳಿಲ್ಲ. ನಾನು ಫೋನ್ ನಲ್ಲಿ ಧ್ವನಿ ಮುದ್ರಣ ಆಗಿದ್ದು ಹೇಳಿಲ್ಲ. ಯಾವ ತಾರೀಖಿನಂದು ಸಂಭಾಷಣೆ ಆಗಿತ್ತು ಎಂದು ಗೊತ್ತಿಲ್ಲ. ಆ ಸಮಯದಲ್ಲಿ ನಾನು ಅಲ್ಲದೆ ಆರ್.ಟಿ.ಓ. ಕಛೇರಿ ರಮೇಶ ಮತ್ತು ಅಣವೀರಪ್ಪ, ರಾಘವೇಂದ್ರ ಇದ್ದರು. ಧ್ವನಿ ಗುರುತಿಸಲು ರಾಘವೇಂದ್ರಪ್ಪ ಮತ್ತು ಅಣವೀರಪ್ಪಗೆ ಕರೆಸಿದ್ದರು. ಅಣ್ಣವೀರಪ್ಪ ಸುರಪೂರದ ರೆವೈನ್ಯೂ ಇನ್ಸಪೇಕ್ಟರ ಸಿ.ಡಿ.ಗಳು ಎಷ್ಟು ನಿಮಿಷದ್ದು ಇತ್ತು ಎಂದು ಗೊತ್ತಿಲ್ಲ. ಧ್ವನಿ ಪಂಚನಾಮೆ ಕಾಲಕ್ಕೆ ವಿಡಿಯೋ ಮಾಡಿದ್ದನ್ನು ನಾನು ನೋಡಿಲ್ಲ. ನನ್ನ ಸಮಕ್ಷಮ ಮೊಬೈಲನಿಂದ ಸಿ.ಡಿ.ಗೆ ವರ್ಗಾವಣೆ ಮಾಡಿಲ್ಲ. ನನಗೆ ಮೊದಲು ಸಿದ್ದಯ್ಯ ಅವರ ಧ್ವನಿ ಗೊತ್ತಿರಲಿಲ್ಲ. ನಮಗೆ ಕೇಳಿಸಿದ ಸಿ.ಡಿ.ಗಳನ್ನು ಮೊದಲು ಸೀಲ್ ಮಾಡಿದ್ದರೂ ಇಲ್ಲವೋ ನಮಗೆ ಗೊತ್ತಿಲ್ಲ. ನಾನು ಯಾದಗಿರಿ ಲೋಕಾಯುಕ್ತ ಕಛೇರಿಗೆ ಬಂದಿದ್ದೆ. ನಾನು ಇಲ್ಲಿಗೆ ಬಂದು ಹೋದ ಬಗ್ಗೆ ನಮ್ಮ ಕಛೇರಿಯಿಂದ ಟಿ.ಎ. ಪಡೆದಿರಲಿಲ್ಲ.

4. ದಿಃ 15-11-2012 ರಂದು ಲೋಕಾಯುಕ್ತ ಕಛೇರಿಯವರು ನಮ್ಮ ಮೇಲಾಧಿಕಾರಿಗಳಿಗೆ ನೋಟೀಸನ್ನು ಕೊಟ್ಟಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ನಮ್ಮ ಮೇಲಾಧಿಕಾರಿಗಳು ಮೌಖಿಕವಾಗಿ ವಿಷಯ ತಿಳಿಸಿ ಲೋಕಾಯುಕ್ತ ಕಛೇರಿಗೆ ಹೋಗುವಂತೆ ತಿಳಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರಮೇಶ ಎನ್ನುವವರು ಸಹ ಆರ್.ಟಿ.ಓ. ಕಛೇರಿಯಿಂದ ಪಂಚರಾಗಿ ಬಂದಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಜಗದೀಶ ಹಂಚನಾಳ ಇನ್ಸಪೇಕ್ಟರ ಅವರನ್ನು ಬೇಟಿಯಾದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅವರು ಪರಸ್ಪರ ಪರಿಚಯ ಮಾಡಿಕೊಟ್ಟರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರಾಘವೇಂದ್ರ ಮತ್ತು ಅಣ್ಣವೀರಪ್ಪ ಅವರನ್ನು ಪರಿಚಯ ಮಾಡಿಸಿದರು ಅವರು ಕಂದಾಯ ಇಲಾಖೆಯವರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿ ಫಿರ್ಯಾದಿ ಸಹ ಇದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಫೋನ್ ನಲ್ಲಿ ಧ್ವನಿ ಮುದ್ರಣವಾಗಿದ್ದು ಎನ್.ಎ.ಗೆ ಸಂಬಂಧಪಟ್ಟಂತೆ 2 ಎಕರೆ ಜಮೀನಿಗೆ ಸಂಬಂಧಪಟ್ಟಂತೆ ಫಿರ್ಯಾದಿ ಡಿ.ಸಿ. ಕಛೇರಿಗೆ ಅರ್ಜಿ ಕೊಟ್ಟಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಬಗ್ಗೆ ಫೋನ್ ನಲ್ಲಿ ಮಾತುಕತೆ ಆಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅವರು ಎ.ಸಿ. ಕಛೇರಿಗೆ ಸ್ಥಳ ನಿರೀಕ್ಷಣೆ ಮಾಡಿ ವರದಿ ಕೊಡುವ ಸಲುವಾಗಿ ಆದೇಶ ಮಾಡಿ ಕಳುಹಿಸಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಡಿ.ಸಿ.

ಕಛೇರಿಯ ಮಾನೇಜರ ಅವರು 25,000/- ರೂಪಾಯಿ ಲಂಚ ಕೇಳಿದ್ದಾಗಿ ಸಂಭಾಷಣೆ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಿ.ಎ. ಅವರು ಗುರುಪಾದಪ್ಪ ಮತ್ತು ಮೇಲಾಧಿಕಾರಿಗಳಿಗೆ 25,000/- ರೂಪಾಯಿ ಲಂಚ ಕೊಡಬೇಕಾಗುತ್ತದೆ ಎಂದು ಹೇಳಿದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಬಗ್ಗೆ ಧ್ವನಿಮುದ್ರಣ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ರಾಘವೇಂದ್ರ ಮತ್ತು ಅಣ್ಣವೀರಪ್ಪ ಇವರು ಎ.ಸಿ. ಕಛೇರಿ ಇಂದ ಬಂದಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅವರು ಆ ಧ್ವನಿಗಳನ್ನು ವಿ.ಎ. ಮತ್ತು ಗುರುಪಾದಪ್ಪ ಅವರ ಧ್ವನಿಗಳು ಎಂದು ಗುರುತಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿ 3 ಸಿ.ಡಿ.ಗಳನ್ನು ತಯಾರಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೊದಲನೇ ಸಿ.ಡಿ.ಯಲ್ಲಿ 30,000/- ರೂಪಾಯಿ ಕೊಡಬೇಕು ಆದರೆ ನಾನೇ 25,000/- ರೂಪಾಯಿಗೆ ಓಪ್ಪಿಸಿದ್ದೇನೆ ಎಂದು ಧ್ವನಿ ಮುದ್ರಣಆಗಿತ್ತು ಗುರುಪಾದಪ್ಪನಿಗೆ ವಿ.ಎ. ಹೇಳಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಸಿ.ಡಿ.ಯಲ್ಲಿ ಗುರುಪಾದಪ್ಪ ಅವರು ಡಿ.ಸಿ. ಕಛೇರಿಯಿಂದ ಕಡತ ತರಿಸಿ ನೋಡಿ ವರದಿ ಸಲ್ಲಿಸುತ್ತೇವೆ ಎಂದು ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ವಿಷಯವನ್ನು ಫಿರ್ಯಾಧಿಗೆ ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸಿ.ಡಿ.ಗಳನ್ನು ಕವರನಲ್ಲಿ ಇಟ್ಟು ಸೀಲ್ ಮಾಡಿ ತಮ್ಮ ವಶಕ್ಕೆ ಪಡೆದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಎಲ್ಲ ವಿಷಯದ ಬಗ್ಗೆ ದಿಃ 15.11.2012 ರಂದು ಮಧ್ಯಾಹ್ನ 12-00 ರಿಂದ 2-00 ಗಂಟೆಯವರೆಗೆ ಲೋಕಾಯುಕ್ತ ಕಛೇರಿಯಲ್ಲಿ ನಡೆಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಬಗ್ಗೆ ಪೊಲೀಸರು ಟೈಪ ಮಾಡಿದ್ದಕ್ಕೆ ನಾನು ಸಹಿ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.